ಕಾಶೀಬಾಯಿ ಹಣಬರ ಪ್ರಕರಣ

ನಿಪ್ಪಾಣಿಯ ಹತ್ತಿರದ ಪಾಂಗಿರೆ ಎಂಬ ಹಳ್ಳಿಯು ಆಗ ಕೊಲ್ಲಾಪುರ ಸಂಸ್ಥಾನದ ಗಡಹಿಂಗ್ಲಜ ತಾಲೂಕಿನಲ್ಲಿತ್ತು. ಅಲ್ಲಿಯ ಕಾಶೀಬಾಯಿ ಹಣಬರ ಎಂಬವಳ ಮಗ ಮಲ್ಲಪ್ಪ ಎಂಬವನು ಭೂಗತನಾಗಿದ್ದನು. ಅವನನ್ನು ಹಿಡಿಯಲು ಗಡಹಿಂಗ್ಲಜದ ಫೌಜದಾರ ಇಂಗವಲೆ ಎಂಬವನು ಇನಸ್ಪೆಕ್ಟರ ಭೋಸಲೆ ಎಂಬವನೂ ಕೂಡಿ ವಿಶ್ವ ಪ್ರಯತ್ನ ಮಾಡಿದರೂ ಮಲ್ಲಪ್ಪ ಸಿಗಲಿಲ್ಲ. ಆಗ ಈ ರಾಕ್ಷಸರೀರ್ವರು ಇಬ್ಬರು ಪೋಲೀಸರ ಸಹಾಯದಿಂದ ಕಾಶೀಬಾಯಿಯ ಮೇಲೆ ಮಾಡಿದ ಅತ್ಯಾಚಾರ ಕೇಳಿ ಜಿಲ್ಲೆಗೆ ಜಿಲ್ಲೆಯೇ ದಂಗು ಬಡೆಯಿತು. ಕಾಶೀಬಾಯಿಯನ್ನೂ ಅವಳ ಗಂಡನನ್ನೂ ಈ ರಾಕ್ಷಸರು ಬಂಧಿಸಿ ಚಿಖಲವಾಳ ಪೋಲೀಸ ಸ್ಟೇಶನ್ನಿಗೆ ಒಯ್ದರು. ಅಲ್ಲಿ ಕಾಶೀಬಾಯಿಯನ್ನು ನಗ್ನ ಮಾಡಿ ತಿಗದ ಮೇಲೆ ಬೆತ್ತದಿಂದ ಮೂರು ಸಲ ಬಡೆದರು. ಅವಳ ಗಂಡನನ್ನೂ ಮನವಾರೆ ಹೊಡದರು. ಮೂರು ದಿನ ಈ ಪತಿ-ಪತ್ನಿಯರನ್ನು ಹೊಡೆದರೂ ಅವರು ತಮ್ಮ ಮಗನಾದ ಮಲ್ಲಪ್ಪನ ಸುಳಿವು ಕೊಡಲಿಲ್ಲ. ಆಗ ಈ ರಾಕ್ಷಸರಿಬ್ಬರೂ ಕಾಶೀಬಾಯಿಯನ್ನು ಬತ್ತಲೆ ಮಾಡಿ ಅವಳ ಯೋನಿಯಲ್ಲಿ (ಜನನೇಂದ್ರಿಯದಲ್ಲಿ) ಖಾರಪುಡಿ ಹಾಕಿದರು. ಮತ್ತು "ಇಂದು ಖಾರಪುಡಿ ಹಾಕಿದ್ದೇವೆ ನಾಳೆ ಕಟ್ಟಿಗೆಯ ಗೂಟ ಬಡೆಯುವೆವು. ಸುಮ್ಮನೆ ಮಲ್ಲಪ್ಪನನ್ನು ಹಿಡಿದುಕೊಡು" ಎಂದು ಅರ್ಭಟಿಸಿದರು. ಈ ಅತ್ಯಾಚಾರದ ಬಗ್ಗೆ ಪತ್ರಿಕೆಗಳಲ್ಲಿ ವಿಶೇಷವಾಗಿ ಬೆಳಗಾವಿಯ ಮರಾಠಿ ಸಾಪ್ತಾಹಿಕವಾದ ತರುಣ ಭಾರತದಲ್ಲಿ ಪ್ರಚಂಡ ಆಂದೋಲನ ನಡೆಯಿತು.

ನಿಪ್ಪಾಣಿ, ಹೆಬ್ಬಾಳ, ಪಾಜ್ಜಾಪುರ, ಅಕ್ಕತಂಗೇರಹಾಳ, ಹುಬ್ಲಿ, ಹೊಸೂರ ಹಿರೇಬಾಗೇವಾಡಿ ಇತ್ಯಾದಿ ಗ್ರಾಮಗಳ ಮೇಲೆ ಪುಂಡಗಂದಾಯ ಹೇರಲಾಯಿತು.

ಉಗರಗೊಳ್ಳದ ಮಾನಪ್ಪ ಮಳಿಗೆಪ್ಪ ಬಡಿಗೇರ ಎಂಬವರು ದಿ. ೨-೧೦-೪೩ ಗಾಂಧಿಜಯಂತಿ ದಿನದಂದು ಜೇಲಿನಲ್ಲಿ ಧ್ವಜವಂದನೆ ಮಾಡಿದ್ದರಿಂದ ಆಡಾಬೇಡಿ ದಂಡಾಬೇಡಿ ಗಂಜಿಸಜಾ ಮುಂತಾದ ಶಿಕ್ಷೆ ಭೋಗಿಸಬೇಕಾಯಿತು.

ತಿಗಡೊಳ್ಳಿಯ ದೇವೆಂದ್ರ ಕಲ್ಲಪ್ಪ ಬಸ್ತವಾಡ ಅವರನ್ನು ಬೆನ್ನು ಹುರಿಯ ಮೇಲೆ ಭಾರಿ ಬಡೆದದ್ದರಿಂದ ಬೆನ್ನುಹುರಿಯ ಒಂದು ಎಲಬು ಒಂದು ಇಂಚಿನಷ್ಟು ಒಳಗೆ ಸರಿದು ಕಾಯಂತರೀಕ ಮೂತ್ರಕೋಶದ ರೋಗವಾಗಿದೆ. ದೊಡ್ಡ ಕೊಡಲಿಯ ಕಾವು ಮುರಿಯುವತನಕ ಬೆನ್ನ ಮೇಲೆ ಬಡೆದರು. ಬಡಿಗೆ ಬೆತ್ತ ಭರಮಪ್ಪ ಎಲ್ಲದರ ಭಾರಿ ಪ್ರಸಾದ ಸಿಕ್ಕದ್ದರಿಂದ ಮೂಗು ಕಿವಿ ಮೂತ್ರ ದ್ವಾರದಿಂದ ರಕ್ತ ಬರುವದು ೧॥ ತಿಂಗಳ ನಡೆದಿತ್ತು. ಇವರ ಮೂಗು ಕಿವಿ ಬೇನೆ ಇಂದಿಗೂ ಅದೆ.

ಶ್ರೀ. ಅಪ್ಪಣ್ಣಗೌಡಾ ಪಾಟೀಲ ಸಂಕೇಶ್ವರ ಇವರ ಸಲುವಾಗಿ ಅವರ ಸಂಬಂಧಿಕ ರಾದ ಶೆಟಗೌಡಾ ಬಾಬಾಗೌಡಾ ಪಾಟೀಲ ಕಮತ್ಯಾನ ಹಟ್ಟಿ (ಚಿಕ್ಕೋಡಿ) ಇವರನ್ನು ಪೋಲೀಸರು ಬಹಳ ಬಡೆದರು. ಬಡೆತದ ಕಚ್ಚುಗಳು ಈಗಲೂ ಅವರ ಮೈಮೇಲೆ ಉಳಿದಿವೆ. ಅಪ್ಪಣ್ಣಗೌಡರ ಮನೆಯಲ್ಲಿಯ ದನಕರುಗಳನ್ನು ಆಸ್ತಿ ಪಾಸ್ತಿಯನ್ನು ಜಪ ಮಾಡಿ ಅವರ ಮಗನನ್ನು ಜೇಲಿಗೆ ಹಾಕಿದರು.

ಶ್ರೀ. ವೀರಪ್ಪ ಸುತಗಟ್ಟಿಯವರು ಪೋಲೀಸರ ಕೈಯೊಳಗಿಂದ ಪಾರಾಗಿ ಹೋಗುವಾಗ ಅವರಿಗೆ ಗುಂಡು ಹಾಕಿದರು. ಗುಂಡು ಬಲಗೈ ತೋಳಿಗೆ ತರಿದು ಹೋಗಿ ಮರಣಾಂತಿಕ ಗಾಯವಾಯಿತು. ಸುದೈವದಿಂದ ಆದರೊಳಗಿಂದ ಅವರು ಚೇತರಿಸಿ ಕೊಂಡರು.

ಜೀವಂತ ನರಕವಾಸ !

ಪೋಲೀಸರಿಂದ ದೈಹಿಕವಾಗಿ ಹೊಡೆತ ಬಡೆತ ತಿಂದು ಬಂದರೆ ಯಮಯಾತನೆ ತೀರುತ್ತಿದ್ದಿಲ್ಲ. ಲಾಕಪ್ಪುಗಳಲ್ಲಿ ಕುರಿಗಳಂತೆ ನಮ್ಮ ಕಾರ್ಯಕರ್ತರನ್ನು ತುಂಬಿ ಅವರಿಗೆ ಬೆಳಕು ಗಾಳಿ ನೀರು ಸಹ ಸರಿಯಾಗಿ ಸಿಗದಂತೆ ಮಾಡಿದರು. ದಿನದಲ್ಲಿ ಎರಡು ಸಾರೆ ಮುಂಜಾನೆ ಒಮ್ಮೆ ಸಂಜೆಗೆ ಒಮ್ಮೆ ಹೀಗೆ ಅದೂ ೧೫ ನಿಮಿಷ ಮಾತ್ರ ಹೊರೆಗೆ ಬಹಿರ್ದಿಶೆಗೆ ಮಲಮೂತ್ರ ವಿಸರ್ಜನೆಗೆ ಬಿಡುತ್ತಿದ್ದರು. ಇಬ್ಬರ ಕೈಗೆ ಬೇಡಿ ಹಾಕಿ ಸಾಲು ಸಾಲಾಗಿ ಶೌಚಕ್ಕೆ ಕೂಡಿಸುತ್ತಿದ್ದರು. ಸ್ನಾನಕ್ಕೆ ನೀರಿಲ್ಲ, ಆರಿವೆ ಒಗೆದು ಕೊಳ್ಳುವ ದಂತೂ ಸಾಧ್ಯವೇ ಇಲ್ಲ. ಮೈಮೇಲೆ ಕೂರಿಗಳು ಹರಿದಾಡುತ್ತಿದ್ದವು, ತಗಣಿ ಗುಂಗಾಡು ಗಳೂ ಚಿಕ್ಕಾಡುಗಳೂ ಒಂದೇ ಸವನೆ ಕಾಡುತ್ತ ನಿದ್ರೆಯನ್ನೇ ಇಲ್ಲದಂತೆ ಮಾಡಿದ್ದವು. ಹಗಲು ಮತ್ತು ರಾತ್ರಿ ೭ಳ ಗಂಟೆ ವನ್ನ ಪಶುಗಳನ್ನಿಟ್ಟಂತೆ ಲಾಕಪ್ಪದಲ್ಲಿ ತುಂಬಿ ಬಿಡು ತ್ತಿದ್ದರು. ನಡುವೆ ಮಲಮೂತ್ರ ವಿಸರ್ಜನೆ ಮಾಡುವದಾದರೆ ಅಲ್ಲಿಯೇ ಲಾಕಪ್ಪ ದಲ್ಲಿದ್ದ ಬಹಿರಂಗ ಬಚ್ಚಲ ಮೂಲೆಯಲ್ಲಿ ಎಲ್ಲರ ಎದುರು ಮಾಡಬೇಕಾಗುತ್ತಿತ್ತು. ಊಟದ ಬಗ್ಗೆಯಂತೂ ಹೇಳುವ ಕಾರಣವೇ ಇದ್ದಿಲ್ಲ. ಹಾಸಲಿಕ್ಕಿಲ್ಲ ಹೊದಿಯಲಿಕ್ಕಿಲ್ಲ ಇಂಥ ಸ್ಥಿತಿಯಲ್ಲಿ ತಿಂಗಳು ಗಟ್ಟಲೆ ಕಾರ್ಯಕರ್ತರು ಕೊಳೆಯಬೇಕಾಯಿತು.

ಮೊದಲು ಪೋಲೀಸರಿಂದ ಬಡೆತದ ಪ್ರಸಾದ ತಿಂದು ಲಾಕಪ್ಪಿನ ಯಮಸದ ನಕ್ಕೆ ಬರಬೇಕು. ಮುಂದೆ ಅಲ್ಲಿ ತಿಂಗಳುಗಟ್ಟಲೆ ನಿಂತು ನರಕಸದೃಶ ಕಚ್ಚಾ ಜೇಲು ಗಳಿಗೆ ಹೋಗಬೇಕು. ಬೆಳಗಾವಿಯಲ್ಲಿ ಹೆಡ್‌ಕ್ವಾರ್ಟರ ಜೇಲ (ಈಗಿನ ಗೋಡಾನ) ಕಿಲ್ಲೆಯ ಕ್ಯಾಂಪ ಜೇಲುಗಳನ್ನು ಪ್ರವೇಶಿಸಿದವರು ನಿಜವಾಗಿಯೇ ನರಕಯಾತನೆ